



# ಊರ ವರ್ತಮಾನ

ಎಷ್ಟೋ ವರ್ಷಗಳ ನಂತರ
ಎದುರುಗೊಂಡ ಊರು
ಮತ್ತಲ್ಲಿನ ಜನರು
ಆಡಲಾರಂಭಿಸಿದ್ದು
ಒಂದೇ ಮಾತು:
'ಈಗ್ಲೇ ನೆರೆ ಬಂದವಲ್ಲಪ್ಪ!'

ಮೊದಲೇ ಹೊರ ಬಿದ್ದ ಮಾತಿಗೆ
ಹಿಮ್ಮೇಳ ಮುಮ್ಮೇಳವಾಗಿ...
'ಬಣ್ಣ ಹಾಕ್ಸೋದಲ್ವಾ...'
'ಈಗಿನ್ ಹುಡುಗ್ರುಗೆಲ್ಲ ಹೀಗೆ ಬುಡಪ್ಪ...'

ಊರು ಮತ್ತದರ ಜನರು
ಯಾಕೋ ನನ್ನವರೆನಿಸಲೇ ಇಲ್ಲ.
ಅವರೊಳಗಿನ ಮಾತು ನನಗೂ
ನನ್ನೊಳಗಿನದು ಅವರಿಗೂ
ತಲುಪಲಾರದಷ್ಟು ಅಂತರ
ನಮ್ಮ ನಡುವೆ ಬಿದ್ದುಕೊಂಡಿತು.
ಯಾರ ನೋಟಕೂ ಅಂಜದ
ಜಾಯಮಾನದ ಊರು
ಇದೀಗ ನನ್ನಂಥವನ
ತಲೆಯಾಗಿನ ಬಿಳಿ ಕೂದಲುಗಳ
ಕುರಿತು ತಲೆ ಕೆಡಿಸಿಕೊಂಡಿದೆ.

ಬದಲಾಗಿರುವುದು
ಊರಿನ ಹವಾಮಾನವೋ
ಜಾಯಮಾನವೋ
ತಿಳಿಯುವ ತಿಮಿರಿನೊಂದಿಗೆ
ಸವೆಸಿದ ಹಾದಿಗೆ
ಊರ ಹವಾಮಾನ ಆಪ್ತವಾಗಿ
ಜಾಯಮಾನ ಒಗ್ಗದೇ ಹೋಯಿತು.

● ಎಚ್.ಕೆ. ಶರತ್